(ಇಂದು ದಿನಾಂಕಃ 18–03–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-

1) ದ್ಯಾಮವ್ವ ಕಾಳೆ ನನ್ನ ಅತ್ತೆಯಾಗಬೇಕು. ಅವರು ಮರಣ ಹೊಂದಿರುತ್ತಾರೆ. ವಿಪಿಸಿ ಸಂಖ್ಯೆ 267 ರ ಒಟ್ಟು ಕ್ಷೇತ್ರ ಗೊತ್ತಿಲ್ಲ. ವಿಪಿಸಿ ಸಂಖ್ಯೆ 267 ರಲ್ಲಿ ಮನೆ ಇದೆ. ಸದರಿ ಆಸ್ತಿಯು ನನ್ನ ಹೆಸರಿನಲ್ಲಿರುತ್ತದೆ. ವಿಪಿಸಿ ಸಂಖ್ಯೆ 267 ರಲ್ಲಿ ನನ್ನ ಹೆಸರು 2023-24 ರಲ್ಲಿ ದಾಖಲು ಆಗಿರುತ್ತದೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಶಾಲೆ ಕಲಿತಿಲ್ಲ. ನಿಡಿ-5 ರಲ್ಲಿ ವಿಪಿಸಿ ಸಂಖ್ಯೆ 267 ರ ದಾಖಲೆಯಲ್ಲಿ ದ್ಯಾಮವ್ವ ತಂದೆ ಲಚಮಪ್ಪ ಕಾಳೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾರಸಾನಾತೆಯಿಂದ ನನ್ನ ಹೆಸರು ದಾಖಲು ಮಾಡಿಸಿಕೊಂಡಿರುತ್ತೇನೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

2) ವಿಪಿಸಿ ಸಂಖ್ಯೆ 267/ಅ ರಲ್ಲಿ ಅರ್ದ ಮನೆ ಮತ್ತು ಹಿತ್ತಲವಿರುತ್ತದೆ. ಅರ್ದ ಮನೆಯ ವಿಸ್ತೀರ್ಣ ಕೇಳಲಾಗಿ ಸಾಕ್ಷಿಯು 13 ಅಡಿ ಅಗಲ 19 ಅಡಿ ಉದ್ದವಿದೆ ಎಂದು ನುಡಿಯುತ್ತಾರೆ. ಹಿತ್ತಲದ ಅಳತೆ ಗೊತ್ತಿಲ್ಲ. ವಿಪಿಸಿ ಸಂಖ್ಯೆ 267/ಅ ರಲ್ಲಿ ಅರ್ದ ಮನೆ ಇದ್ದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಿಪಿಸಿ ಸಂಖ್ಯೆ 267/ಅ ರಲ್ಲಿ ಅರ್ದ ಮನೆ ಇದ್ದ ಬಗ್ಗೆ ಛಾಯಾಚಿತ್ರವನ್ನು ಹಾಜರು ಪಡಿಸಿರುತ್ತೇನೆ. ವಿಪಿಸಿ ಸಂಖ್ಯೆ 267/ಅ ರ ಪೂರ್ವಕ್ಕೆ ದ್ಯಾಮವ್ವ ರವರ ಆಸ್ತಿ ಇದೆ. ಸೂರ್ಯ ಮುಲುಗುವ ದಿಕ್ಕಿಗೆ ವಾದಿಯ ಆಸ್ತಿ ಇರುತ್ತದೆ. ಅದು ಖಾಲಿ ಜಾಗವಿರುತ್ತದೆ. ಉತ್ತರಕ್ಕೆ ಹನುಮಪ್ಪ (ವಾದಿ) ರವರ ಆಸ್ತಿ. ದಕ್ಷಿಣಕ್ಕೆ ರಸ್ತೆ ಇರುತ್ತದೆ.

3) ಶಿಶುವಿನಹಳ್ಳಿ ವಿಪಿಸಿ ಸಂಖ್ಯೆ 268 ಮೂಲತಃ ಮರಿಯವ್ವ ಕೋಂ ಯಲ್ಲಪ್ಪ ನೀಲಮ್ಮನವರ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಮರಯವ್ವ ವಾದಿಯ ಅಕ್ಕಳಾಗಬೇಕು. ಮರಿಯವ್ವ 1992 ರಲ್ಲಿ ಆಸ್ತಿಯನ್ನು ವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ವಿಪಿಸಿ ಸಂಖ್ಯೆ 268 ಕ್ಕೆ ವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ವಿಪಿಸಿ ಸಂಖ್ಯೆ 267 ರ ಪೂರ್ವಕ್ಕೆ ವಿಪಿಸಿ ಸಂಖ್ಯೆ 41/ಬಿ ಬರುತ್ತದೆ ಎಂದರೆ ಸರಿ. ವಿಪಿಸಿ ಸಂಖ್ಯೆ 41/ಬಿ ರ ಮುತ್ತವ್ವ ಕೋಂ ಹನುಮಪ್ಪ ಕಾಳೆ ವಾದಿಯ ಹೆಂಡತಿ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

4) ವಿಪಿಸಿ ಸಂಖ್ಯೆ 41/ಬಿ ಆಸ್ತಿಯನ್ನು ನಾನು ನೋಡಿದ ಬಗ್ಗೆ ಕೇಳಲಾಗಿ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹನುಮಂತಪ್ಪ ನನ್ನ ಗಂಡ ದ್ಯಾಮವ್ವ ನನ್ನ ಅತ್ತೆಯಾಗಬೇಕು. ವಿಪಿಸಿ ಸಂಖ್ಯೆ 267/ಅ ರಲ್ಲಿ ಈಗ ನನ್ನ ಹಾಗೂ ನನ್ನ ಮಕ್ಕಳ ಹೆಸರು ಇರುತ್ತದೆ. ಸಾಕ್ಷಿಗೆ ಈಗ ನಿಡಿ-7 ತೋರಿಸಿ ಅದನ್ನು ಪಡೆಯುವ ಸಮಯದಲ್ಲಿ ನನ್ನ ಗಂಡ ಹನುಮಂತಪ್ಪ ಜೀವಂತವಿದ್ದ ಬಗ್ಗೆ ಕೇಳಲಾಗಿ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ಮರಣ ಹೊಂದಿ ಈಗ 4 ನೇ ವರ್ಷ ಚಾಲ್ತಿಯಲ್ಲಿದೆ.

5) ನಿಡಿ-7 ಪಡೆದ ನಂತರದಲ್ಲಿ ಷರತ್ತಿನ ಮೇರೆಗೆ ಮನೆ ನಿರ್ಮಾಣ ಮಾಡಿಲ್ಲ. ಸಾಕ್ಷಿಯು ಮುಂದುವರೆದು ಹರಕತ್ತು ಮಾಡಿರುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ವಿಪಿಸಿ ಸಂಖ್ಯೆ 268 ರ ಪಶ್ಚಿಮ ದಿಕ್ಕಿಗೆ ಬರುವ ಹಾತನಕಾಶೆಯಲ್ಲಿ ಕಾಣಿಸಿದ ಅ,ಬ,ಕ,ಡ ಅಕ್ಷರಗಳ ನಡುವೆ ಬರುವ ಸ್ಥಳ ಅಂದಾಜು ಪೂರ್ವ ಪಶ್ಚಿಮ ಒಂದೂವರೆ ಅಡಿ ಹಾಗೂ ಉತ್ತರ ದಕ್ಷಿಣ 35 ಅಡಿ ಸ್ಥಳವನ್ನು ಅತೀಕ್ರಮಣ ಮಾಡಿ ನಾನು ಕಟ್ಟಡ ನಿರ್ಮಾಣ ಮಾಡುವ ಪ್ರಯತ್ನ ಮಾಡಿರುತ್ತೇನೆ ಅಂದರೆ ಸರಿಯಲ್ಲ.

6) ನನಗೆ ಮತ್ತು ಹನುಮಂತಪ್ಪನ ನಡುವೆ ಸಂಬಂದವಿಲ್ಲ. ನನ್ನ ಹಾಗೂ ವಾದಿಯ ನಡುವೆ ವೈಮನಸ್ಸು ಇರುತ್ತದೆ ಅಂದರೆ ಸರಿಯಲ್ಲ. ವಾದಿಯರು ಪಂಚಾಯತಗೆ ದೂರು ನೀಡಿ ಪಂಚಾಯತ ಅಧಿಕಾರಿ ಬಂದು ನನಗೆ ಅತೀಕ್ರಮಣ ಮಾಡದಂತೆ ಹಾಗೂ ಪರವಾನಿಗೆ ಇಲ್ಲದೇ ಕಟ್ಟಡ ನಿರ್ಮಾಣ ಮಾಡದಂತೆ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಗೆ ಬುದ್ದಿಮಾತು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

7) ನಿಡಿ-7 ರ ಅನುಸಾರ ವಾದಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಯಾವುದೇ ಕಟ್ಟಡ ಕಟ್ಟದೇ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ಸುಳ್ಳು ಸಂಗತಿಗಳನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. ನನ್ನ ಹಾಗೂ ವಾದಿಯ ನಡುವೆ ಸುಮಾರು 2017 ನೇ ಇಸವಿಯಿಂದ ಪ್ರಕರಣ ನಡೆಯುತ್ತಾ ಬಂದಿರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2011 ರಿಂದ ನಡೆಯುತ್ತಾ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಎತ್ತಿಹಾಕುವ ದೂರದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

8) ಡಿಡಬ್ಲ್ಯೂ-2 ರವರು ನಮ್ಮ ಮನೆ ನಿರ್ಮಾಣ ಕೆಲಸ ಮಾಡುವವರು. ಡಿಬ್ಲ್ಯೂ-2 ರವರು ಮಲ್ಲಿಗವಾಡ ರವರು ಶಿಶುವಿನಹಳ್ಳಿ ಗ್ರಾಮದಲ್ಲಿ ಇರುತ್ತಾರೆ. ಶಿಶುವಿನಹಳ್ಳಿ ಗ್ರಾಮದಲ್ಲಿ ಅವರ ಮನೆ ಹಾಗೂ ಆಸ್ತಿಗಳು ಇರುತ್ತದೆ. ವಿಪಿಸಿ ಸಂಖ್ಯೆ 267 ರಿಂದ ಡಿಬ್ಲ್ಯೂ-2 ರವರ ಮನೆಯು ಸುಮಾರು ಅರ್ಧ ಕೀಲೋಮೀಟರ ಅಂತರದಲ್ಲಿರುತ್ತದೆ. ಡಿಬ್ಲ್ಯೂ-3 ನಮ್ಮ ಓಣಿಯವರು ಮತ್ತು ನಮ್ಮ ಜಾತಿಯವರು. ಸದರಿಯವರ ಆಸ್ತಿ ಸಂಖ್ಯೆ 269 ಇರುತ್ತದೆ. ಸದರಿ ಆಸ್ತಿಯ ಪೂರ್ವಕ್ಕೆ ಹನುಮಂತಪ್ಪ ರವರ ಆಸ್ತಿ ಬರುತ್ತದೆ. ಸೂರ್ಯ ಮುಲುಗುವ ದಿಕ್ಕಿಗೆ ದ್ಯಾಮವ್ವ ಕಾಳೆ ರವರ ಆಸ್ತಿ ಹಾಗೂ ಉತ್ತರಕ್ಕೆ ನಮ್ಮ ಹಿತ್ತಲ 267 ಇದೆ, ದಕ್ಷಿಣಕ್ಕೆ ಹನುಮಂತಪ್ಪ ಕಾಳೆ ರವರ ಆಸ್ತಿ ಇದೆ. ಡಿಬ್ಲ್ಯೂ-3 ಮತ್ತು ನಮ್ಮ ನಡುವೆ ಒಳ್ಳೆಯ ಒಡನಾಟ ಇದೆ. ನಾವು ಪರಸ್ಪರ ಸಹಾಯ ಮಾಡುತ್ತೇವೆ ಎಂದರೆ ಎಲ್ಲಾರೂ ಮಾಡುತ್ತಾರೆ. ವಾದಿಗೆ ತೊಂದರೆ ನೀಡುವ ದೂರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**